# ಕೇಂದ್ರೀಯ ಹತ್ತಿ ಸಂಶೋಧನಾ ಸಂಸ್ಥೆ, ನಾಗಪುರ, ಮಹಾರಾಷ್ಟ್ರ

*[ ಭಾರತೀಯ ಕೃಷಿ ಅನುಸಂಧಾನ ಪರಿಷತ್ತು (ಭಾ. ಕೃ. ಅ. ಪ), ಕೃಷಿ ಮಂತ್ರಾಲಯ, ಭಾರತ ಸರ್ಕಾರ ]*

## ಹತ್ತಿ ಬೆಳೆಯ ಸಾಪ್ತಾಹಿಕ ಸಲಹೆ, ಆಗಸ್ಟ್ 13 ರಿಂದ ಆಗಸ್ಟ್ 19, 2024 ರ ಅವಧಿಗೆ

*"ಈ ಸಲಹೆಯು ರಾಜ್ಯ ಕೃಷಿ ವಿಶ್ವವಿದ್ಯಾನಿಲಯಗಳಿಂದ ಸ್ವೀಕರಿಸಿದ ಮಾಹಿತಿಯನ್ನು ಆಧರಿಸಿದೆ"*

| ಕರ್ನಾಟಕ | IMDಯ ಪ್ರಕಾರ ಮಳೆಯ ಮುನ್ಸೂಚನೆ (ಮಿ.ಮೀ) | | | | | | | | | |
|---|---|---|---|---|---|---|---|---|---|---|
| ದಿನಾಂಕ | ಆಗಸ್ಟ್ | | | | | | | | | |
| | 09 | 10 | 11 | 12 | 13 | 15 | 16 | 17 | 18 | 19 |
| ಧಾರವಾಡ | 1 | 0 | 0 | 0 | 0 | 2 | 3 | 3 | 2 | 5 |
| ಹಾವೇರಿ | - | - | - | - | - | 2 | 3 | 3 | 3 | 5 |
| ಮೈಸೂರು | 0 | 14 | 0 | 3.5 | 0 | 5 | 18 | 16 | 15 | 12 |

| ಮಳೆಯ ಮಾಹಿತಿಯ ಮಾದರಿ | | | | | | ಮಳೆಯ ಮಾಹಿತಿಯ ಮೂಲ: |
|---|---|---|---|---|---|---|
| ಮಳೆಯ ಪ್ರಮಾಣ (ಮಿ.ಮೀ) | 0.1-2.4 | 2.5-15.5 | 15.6-64.4 | 64.5-115.5 | 115.6-204.4 | http://nwp.imd.gov.in/bias/dist_fcst.htm |

**ಬೆಳೆಯ ಸ್ಥಿತಿ:**

ಧಾರವಾಡ ಜಿಲ್ಲೆಯಲ್ಲಿ ಬಿತ್ತಿದ ಬೆಳೆಯು ಆರಂಭಿಕ ಸಸ್ಯಕ/ ಕಾಪು ರಚನೆ ಹಂತದಲ್ಲಿದೆ. ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅಲ್ಲಲ್ಲಿ ಮಳೆಯಾಗಿ ಗರಿಕೆ ಮತ್ತು ಜೇಕದಂತಹ ಕಳೆಗಳ ಸಂಖ್ಯೆ ಜಾಸ್ತಿಯಾಗಿದ್ದು, ರಸ ಹೀರುವ ಕೀಟ ಮತ್ತು ಮೂತಿ ಹುಳುವಿನ ಬಾಧೆಯು ಅಲ್ಲಲ್ಲಿ ಕಂಡು ಬಂದಿತ್ತು, ಆದರೆ, ಯಾವುದೇ ರೋಗ ಬಾಧೆ ಕಂಡು ಬಂದಿಲ್ಲ.

ರಾಯಚೂರು ಜಿಲ್ಲೆಯಲ್ಲಿ, ಮೊದಲು ಬಿತ್ತಿದ ಬೆಳೆಯು 56 ರಿಂದ 66 ದಿನಗಳ ಸಸ್ಯಕ/ ಕಾಪು ರಚನೆ ಹಂತದಲ್ಲಿ, ತಡವಾಗಿ ಬಿತ್ತಿದ ಬೆಳೆಯು 34 ರಿಂದ 39 ದಿನಗಳ ಸಸ್ಯಕ ಹಂತದಲ್ಲಿ ಮತ್ತು ಬಹಳ ತಡವಾಗಿ ಬಿತ್ತಿದ ಬೆಳೆಯು 19 ರಿಂದ 24 ದಿನಗಳ ಆರಂಭಿಕ ಬೆಳವಣಿಗೆಯ ಹಂತದಲ್ಲಿದೆ. ಅಂತರ ಬೇಸಾಯ, ಕೈ ಕಳೆ ಕೀಳುವುದು ಮತ್ತು ಹನಿ ನೀರಾವರಿ ಮೂಲಕ ರಸಗೊಬ್ಬರ ಒದಗಿಸುವ ಕಾರ್ಯಗಳು ಪ್ರಗತಿಯಲ್ಲಿವೆ. ಮೊದಲು ಬಿತ್ತಿದ ಬೆಳೆಗೆ ಶಿಫಾರಸು ಮಾಡಿದ ರಸಗೊಬ್ಬರಗಳ ಮೊದಲ ಪ್ರಮಾಣವನ್ನು (ಡಿಎಪಿ, ಎಂಒಪಿ ಮತ್ತು ಮೆಗ್ನೀಸಿಯಂ ಸಲ್ಫೇಟ್) ನೀಡಲಾಗಿದ್ದು, ಬಿತ್ತಿದ ದಿನ ಅಥವಾ ಬೆಳೆ ಬಿತ್ತಿದ 24 ಘಂಟೆಗಳೊಳಗಾಗಿ ಉದಯಪೂರ್ವ ಕಳೆನಾಶಕವನ್ನು ಮತ್ತು 25-30 ದಿನಗಳ ಬೆಳೆಗೆ ಉದಯೋತ್ತರ ಕಳೆನಾಶಕವನ್ನು ಸಿಂಪಡಿಸಲಾಗಿದೆ.

ಚಾಮರಾಜ ನಗರ ಜಿಲ್ಲೆಯಲ್ಲಿ ಹತ್ತಿ ಬೆಳೆಯು 79-94 ದಿನಗಳದ್ದಾಗಿದ್ದು, ಹೂ ಬಿಟ್ಟು ಕಾಯಿ ಬರುವ

ಹಂತದಲ್ಲಿದೆ. ಯೂರಿಯ ಮೇಲುಗೊಬ್ಬರ, ಕಳೆ ನಿರ್ಮೂಲನೆ, ಬದು ಮಾಡುವುದು ಹಾಗು ಇತರೆ ಅಂತರ್ ಬೇಸಾಯಕ್ರಮಗಳು ಪ್ರಗತಿಯಲ್ಲಿವೆ. ಥ್ರಿಪ್ಸ್ ನುಸಿ (1-2/3 ಎಲೆಗಳಿಗೆ), ಜಿಗಿ ಹುಳು (2-4/3 ಎಲೆಗಳಿಗೆ) ಮತ್ತು ಬಿಳಿ ನೊಣಗಳ (1-2/3 ಎಲೆಗಳಿಗೆ) ಬಾಧೆಯು ಕಂಡು ಬಂದಿತ್ತು.

**ಸಲಹೆ:**

ಧಾರವಾಡ ಜಿಲ್ಲೆಯಲ್ಲಿ ರೈತರಿಗೆ ಕಳೆ ಕೀಳಲು ಮತ್ತು ಎಡೆ ಹೊಡೆಯಲು ಸೂಚಿಸಲಾಗಿದೆ. ಮೂತಿ ಹುಳುವಿನ ನಿಯಂತ್ರಣಕ್ಕಾಗಿ ಬಲೆ ಬೆಳೆಯಾದ ಬೆಂಡೆಕಾಯಿ ಬೆಳೆಯಿಂದ ಮೂತಿ ಹುಳುವನ್ನು ಸಂಗ್ರಹಿಸಿ ನಾಶ ಪಡಿಸಲು ಸೂಚಿಸಲಾಗಿದೆ. ಸಸ್ಯಹೇನುಗಳಂತಹ ರಸ ಹೀರುವ ಕೀಟಗಳನ್ನು ತಡೆಗಟ್ಟಲು ಬೇವಿನ ಬೀಜದ ದ್ರವ್ಯ 5% + ಬೇವಿನ ದ್ರಾವಣ 5 ಮೀ ಲಿ ಪ್ರತಿ ಲೀಟರ್ ಗೆ (300 ಅಥವಾ 1500 ppm) + 1.0 ಗ್ರಾಂ ಮಾರ್ಜಕವನ್ನು ಬೆರೆಸಿ ಅಥವಾ ಬೇವು-ಆಧರಿತ ದ್ರಾವಣವನ್ನು ಪ್ರತಿ ಲೀಟರ್ ನೀರಿನಲ್ಲಿ 5 ಮಿ. ಲೀ. ನಂತೆ ಬೆರೆಸಿ ಸಿಂಪಡಿಸಲು ಸೂಚಿಸಲಾಗಿದೆ. ರಸ ಹೀರುವ ಕೀಟಗಳ ಸಂಖ್ಯೆಯು ಆರ್ಥಿಕ ಗರಿಷ್ಠ ಮಟ್ಟವನ್ನು ದಾಟಿದಲ್ಲಿ, ಪ್ರತಿ ಎಕರೆಗೆ, ಫ್ಲೋನಿಕಾಮಿಡ್ 50 WG @ 80 ಗ್ರಾಂ ಅಥವಾ ಬುಪ್ರೊಫೆಜಿನ್ 25SC 400 ಮಿ ಲೀ. ಅಥವಾ ಡಯಾಫೆನ್ಥಿಯುರಾನ್ 50WP @ 240 ಗ್ರಾಂ. ನಂತೆ ಸಿಂಪಡಿಸಬೇಕು. ಗುಲಾಬಿ ಕಾಯಿ ಕೊರಕದ ಪತಂಗದ ಮೇಲೆ ನಿಗಾ ವಹಿಸಲು ಪ್ರತಿ ಎಕರೆಗೆ 2 ರಂತೆ ಲಿಂಗಾಕರ್ಷಕ ಬಲೆಗಳನ್ನು ನೆಡಬೇಕು ಮತ್ತು ಮುಕ್ತಾಯದ ಅವಧಿಗೆ ತಕ್ಕಂತೆ ಲ್ಯೂರ್ ಅನ್ನು ಬದಲಾಯಿಸಬೇಕು.

ರಾಯಚೂರು ಜಿಲ್ಲೆಯಲ್ಲಿ, ರೈತರಿಗೆ ಸಮಯಕ್ಕೆ ಸರಿಯಾಗಿ ಕಳೆ ಕೀಳಲು ಸೂಚಿಸಲಾಗಿದೆ. ಮೊದಲು ಬಿತ್ತಿದ ಬೆಳೆಗೆ ರಸಗೊಬ್ಬರಗಳ (ಡಿಎಪಿ, ಎಂಒಪಿ ಮತ್ತು ಮೆಗ್ನೇಸಿಯಂ ಸಲ್ಫೇಟ್) ಮೊದಲ ಪ್ರಮಾಣವನ್ನು ಹಾಗೂ 30 ದಿನಗಳ ಅವಧಿಯ ಬೆಳೆಗೆ ಪ್ರತಿ ಎಕರೆಗೆ ಯೂರಿಯಾ (20 ಕೆ.ಜಿ.) ಮತ್ತು ಎಂ.ಒ.ಪಿ (12 ಕೆ.ಜಿ.) ಮೇಲುಗೊಬ್ಬರವನ್ನು ನೀಡುವಂತೆ ಸೂಚಿಸಲಾಗಿದೆ. 25-30 ದಿನಗಳ ಬೆಳೆಗೆ ಪಿರಿಥಿಯೋಬಾಕ್ ಸೋಡಿಯಂ (ಉದಯೋತ್ತರ) ಕಳೆನಾಶಕವನ್ನು 1.5 ಮಿಲಿ/ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಲು ಸಲಹೆ ನೀಡಲಾಗಿದೆ. ಮೊದಲು ಬಿತ್ತಿದ ರೈತರ ಹೊಲಗಳ ಕೆಲವು ಕಡೆ ಥ್ರಿಪ್ಸ್ ನುಸಿ ಮತ್ತು ಜಿಗಿ ಹುಳುಗಳು ಕಾಣಿಸಿಕೊಂಡಿದ್ದು, ಪ್ರತಿ ಎಕರೆಗೆ ಥಿಯೋಮೆಥಾಕ್ಸಮ್ 25 ಡಬ್ಲ್ಯೂ ಜಿ @ 40 ಗ್ರಾಂ. ಅಥವಾ ಡೈನೋಟ್ಯುರಾನ್ 20% ಎಸ್‌ಜಿ @ 60 ಗ್ರಾಂ. ನಂತೆ ಸಿಂಪಡಿಸಬೇಕು. ಕೆಲವು ರೈತರ ಹೊಲಗಳು ಜಿಗಿಹುಳುವಿನಿಂದ ಬಾಧಿತವಾಗಿದ್ದು, ಎಕರೆಗೆ 80 ಗ್ರಾಂ ಫ್ಲೋನಿಕಾಮಿಡ್ ಸಿಂಪರಣೆ ಮಾಡಲು ಸಲಹೆ ನೀಡಲಾಗಿದೆ. ಮೊದಲು ಬಿತ್ತಿದ ಬೆಳೆಗಳಲ್ಲಿ, ಗುಲಾಬಿ ಕಾಯಿ ಕೊರಕದ ಸಂಖ್ಯೆಯನ್ನು ಗಮನಿಸಲು ಲಿಂಗಾಕರ್ಷಕ ಬಲೆಗಳನ್ನು ಪ್ರತಿ ಎಕರೆಗೆ ಎರಡರಂತೆ ಅಳವಡಿಸಲು ಸೂಚಿಸಲಾಗಿದೆ. ಕೆಲವು ಪ್ರದೇಶಗಳಲ್ಲಿ ಬಿತ್ತನೆಯು ಆಗದೇ ಇದ್ದ ಸಂದರ್ಭದಲ್ಲಿ, ಬಿತ್ತನೆಗೂ ಮುನ್ನ, ಬೀಜ ಮತ್ತು ಮಣ್ಣಿನಿಂದ ಹರಡುವ ರೋಗಗಳ ನಿರ್ವಹಣೆಗಾಗಿ ಪ್ರತಿ ಕಿಲೋ ಗ್ರಾಂ ಬೀಜಗಳಿಗೆ ಶಿಲೀಂಧ್ರನಾಶಕಗಳಾದ ಕಾರ್ಬಾಕ್ಸಿನ್ 37.5% + ಥಿರಮ್ 37.5% ಡಿಎಸ್ @3.5 ಗ್ರಾಂ (ಬೇರು ಕೊಳೆತ ಮತ್ತು ಬ್ಯಾಕ್ಟೀರಿಯಾದ ಕಾಯಿಲೆಗಳು) ಅಥವಾ ಫ್ಲಕ್ಸಾಪೈರಾಕ್ಸಾಡ್ (333 ಗ್ರಾಂ/ಲೀ ಎಫ್‌ಎಸ್) @ 1.5 ಮಿ.ಲೀ. ಅಥವಾ ಟೆಟ್ರಾಕೊನಜೋಲ್ 11.6% W/W (12.5% w/v) SL @1.5 ಮಿ.ಲೀ. ಪ್ರತಿ ಕಿಲೋ ಗ್ರಾಂ ಬೀಜಗಳಿಗೆ ಅಥವಾ *ಟ್ರೈಕೋಡರ್ಮಾ ಹಾರ್ಜಿಯಾನಮ್* ಅಥವಾ *ಟ್ರೈಕೋಡರ್ಮಾ ವಿರಿಡೆ* @ 10 ಗ್ರಾಂ ಪ್ರತಿ ಕಿಲೋ ಗ್ರಾಂ ನಂತೆ ಬೀಜೋಪಚಾರ ಮಾಡಲು ರೈತರಿಗೆ ಸಲಹೆ ನೀಡಲಾಗಿದೆ.

ಚಾಮರಾಜನಗರ ಜಿಲ್ಲೆಯಲ್ಲಿ, ರೈತರಿಗೆ ಪ್ರತಿ ಎಕರೆಗೆ 8 ರಂತೆ ಹಳದಿ ಜಿಗುಟಾದ ಬಲೆಗಳನ್ನು ಅಳವಡಿಸಲು ಸಲಹೆ ನೀಡಲಾಗಿದ್ದು, 60 ದಿನಗಳವರೆಗೆ ಬೆಳೆಗೆ ಯಾವುದೇ ರಾಸಾಯನಿಕ ಸಿಂಪಡಣೆಯನ್ನು ಮಾಡದಂತೆ ಸೂಚಿಸಲಾಗಿದೆ. ಆದಾಗ್ಯೂ, ಯಾವುದೇ ಕೀಟ ಬಾಧೆಯು ಆರ್ಥಿಕ ಗರಿಷ್ಠ ಮಟ್ಟದವರೆಗೆ ಕಂಡುಬಂದಲ್ಲಿ, ಬೇವಿನ ಬೀಜದ ಸಾರ (NSKE) 5% + ಬೇವಿನ ದ್ರಾವಣ 5 ml ಪ್ರತಿ ಲೀಟರ್ ಅಥವಾ ಬೇವು-ಆಧರಿತ ದ್ರಾವಣವನ್ನು (300 ಅಥವಾ 1500 ppm) ಪ್ರತಿ ಲೀಟರ್ ನೀರಿನಲ್ಲಿ 5 ಮಿ. ಲೀ. ನಂತೆ + 1.0 ಗ್ರಾಂ. ಮಾರ್ಜಕ (ಡಿಟರ್ಜೆಂಟ್) ಬೆರೆಸಿ (ಆರಂಭಿಕ 1-2 ಸಿಂಪರಣೆಗಳು) ಸಿಂಪಡಿಸಲು ಸೂಚಿಸಲಾಗಿದೆ. ಜಿಗಿ ಹುಳುವಿನ ಬಾಧೆಯು ಆರ್ಥಿಕ ಗರಿಷ್ಠ ಮಟ್ಟ ದಾಟಿದರೆ ಪ್ರತಿ 10 ಲೀಟರ್ ನೀರಿಗೆ ಫ್ಲೋನಿಕಾಮಿಡ್ 50%WG @ 4.0 ಗ್ರಾಂ ಅಥವಾ ಡಿನೋಟೆಫುರಂ 20%SG @ 3 ಗ್ರಾಂ. ನಂತೆ ಬೆರೆಸಿ ಸಿಂಪಡಿಸಲು ಸಲಹೆ ನೀಡಲಾಗಿದೆ.

*ಭಾ. ಕೃ. ಅ. ಪ. – ಕೇಂದ್ರೀಯ ಹತ್ತಿ ಸಂಶೋಧನಾ ಸಂಸ್ಥೆ, ನಾಗಪುರ*

*ಕನ್ನಡ ಅನುವಾದ*

***ಡಾ. ನೀಲಕಂಠ ಸ. ಹಿರೇಮನಿ***